ಶ್ರೀ ಆರ್. ಗುಂಡೂರಾವ್.—೧೯೭೯-೮೦ರ ಬಜೆಟ್‌ನಲ್ಲಿ ಇದನ್ನು ಸೇರಿಸಿಲ್ಲ. ೧೯೮೦-೮೧ರ ಬಜೆಟ್‌ನಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದನು ಸೇರಿಸಲು ಪ್ರಯತ್ನ ಮಾಡುತ್ತೇವೆ,

ಶ್ರೀ ಎಸ್.ಎಸ್. ಅರಕೇರಿ.—ಈ ಮೊದಲು ನಾನು ತಮ್ಮ ಹತ್ತಿರ ಮಾತನಾಡಿದಾಗ ಈ ಕೆಲಸವನ್ನು ಸೇರಿಸಲಾಗುತ್ತದೆಂದು ಹೇಳಿದ್ದೀರಿ, ಆದರೆ ಸೇರಿಸಿಲ್ಲ. ಈ ಸೇತುವೆ ಕೆಲಸದಿಂದ ಅನೇಕ ಹಳ್ಳಿಯ ಜನರಿಗೆ ನಾನಾ ರೀತಿಯಿಂದ ಅನುಕೂಲವಾಗುವುದರಿಂದ, ಇದಕ್ಕೆ ಟಾಪ್ ಪ್ರೈಯಾರಿಟಿ ಕೊಟ್ಟು ಈ ಸಲದ ಬಜೆಟ್‌ನಲ್ಲಿಯೇ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಇದಕ್ಕೆ ಟಾಪ್ ಪ್ರೈಯಾರಿಟಿ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಟಾಪ್ ಪ್ರೈಯಾರಿಟಿ ಮೇಲೆಯೇ ಇದನ್ನು ಪರಿಶೀಲನೆ ಮಾಡುತ್ತೇವೆ.

Government Primary Schools in Bijapur Taluka.

17. SRI B.B. PATIL (Tikota). Will the Minister for Education be pleased to state.

(a) the total number of Government Primary Schools in Bijapur Taluka of Bijapur District ;

(b) the total number of teachers in these schools ;

(c) whether it has come to the notice of the Government that No, of Primary Schools in Bijapur taluka are without adequate Number of teachers ;

(d) if so the reasons therefor :

(e) the steps the Government has taken to remedy the situation ?

SRI G. B. SHANKAR RAO (Minister for Education).—

(a) 239,

(b) 634.

(c) Yes.

(d) due to increasing strength in various schools and retirement of teachers.

(e) All the vacancies of Primary School teachers in the District will be filled up through DLRC Shortly.

ಶ್ರೀ ಬಿ.ಬಿ. ಪಾಟೀಲ್.—ಸನ್ನ (ಇ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ಹೇಳಿದ್ದೀರಿ. ಹಾಗಿದ್ದರೆ ಈಗ ಅಲ್ಲಿರುವ ಮಡುಗರ ಸಂಖ್ಯೆ ಎಷ್ಟು ಮತ್ತು ಈಗ ಆಲ್ಲಿಗೆ ಎಷ್ಟು ಮಂದಿ ಉಪಾಧ್ಯಾಯರ ಅವಶ್ಯಕತೆ ಇದೆ ಎಂಬುದನ್ನು ತಿಳಿಸುತ್ತೀರಾ?

† ಶ್ರೀ ಜಿ ಬಿ. ಶಂಕರ್‌ರಾವ್.—ಈಗ ಬಿಜಾಪುರದ ಡಿ.ಡಿ.ಪಿ.ಐ. ಅವರು ೪೦೦ ಸ್ಥಾನಗಳಿಗೆ ಅರ್ಜಿ ಕರೆದಿದ್ದಾರೆ. ಅಂದರೆ ೪೦೦ ಜನ ಶಿಕ್ಷಕರನ್ನು ನೇಮಕ ಮಾಡಬೇಕಾಗಿದೆ. ಈಗ ಅಲ್ಲಿನ ಸೆಲೆಕ್ಷನ್ ಕಮಿಟಿಯ ಕೆಲಸವನ್ನು ಕೆಲಸ ತೃಪ್ತಿಕರವಾಗಿಲ್ಲವೆಂಬ ಕಾರಣದಿಂದ ಸರ್ಕಾರ ಕೆಲವು ದಿವಸಗಳ ಮಟ್ಟಿಗೆ ತಡೆಹಿಡಿದಿದೆ. ಮುಂದಿನ ತಿಂಗಳ ಮಧ್ಯ ಭಾಗದಲ್ಲಿ ಹೊಸ ಕಮಿಟಿಯನ್ನು ನಿರ್ಮಾಣ ಮಾಡಿ, ಈ ೪೦೦ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೆಂದು ಹೇಳುತ್ತೇವೆ.

† Indicates that remarks or speeches have not been revised by the member concerned.

ಶ್ರೀ ಬಿ.ಬಿ. ಪಾಟೀಲ್ — ಇಲ್ಲಿ ಬಹಳ ಕಾಲದಿಂದಲೂ ಉಪಾಧ್ಯಾಯರುಗಳ ಕೊರತೆ ಇದೆ. ಅನೇಕ ಪ್ರಾಥಮಿಕ ಶಾಲೆಗಳಲ್ಲಿ ೬೧-೮೦ ೧೦೦ ಹುಡುಗರಿಗೆ ಒಬ್ಬರು ಉಪಾಧ್ಯಾಯರು ಇದ್ದಾರೆ. ಕೆಲವು ಸಂದರ್ಭಗಳಲ್ಲಿ ಇವರನ್ನು ಸಹ ಬೇರೆ ಕಡೆಗೆ ವರ್ಗ ಮಾಡಿದರೆ, ಅಲ್ಲಿ ಹುಡುಗರಿಗೆ ಪಾಠ ಹೇಳುವವರೇ ಇಲ್ಲದಂತೆ ಆಗುತ್ತದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದೀರಿ. ಇಲ್ಲಿ ಉತ್ತರದಲ್ಲಿ ಹೇಳಿರುವ ಪ್ರಕಾರ ಜಾಗ್ರತೆ ರೆಕ್ರೂಟ್‌ಮೆಂಟ್ ಕಮಿಟಿಯನ್ನು ರಚನೆ ಮಾಡಿ ಅವಶ್ಯಕತೆ ಇರುವಷ್ಟು ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತೀರಾ?

ಶ್ರೀ ಜಿ.ಬಿ. ಶಂಕರ್‌ರಾವ್ — ಮಾನ್ಯ ಸದಸ್ಯರು ಹೇಳಿದಂತೆ ೮೦-೧೦೦ ಹುಡುಗರಿಗೆ ಒಬ್ಬರಂತೆ ಉಪಾಧ್ಯಾಯರು ಇಲ್ಲ. ೪೦ ಹುಡುಗರಿಗೆ ಒಬ್ಬರು ಉಪಾಧ್ಯಾಯರು ಇರಬೇಕೆಂದು ನಿಯಮವಿದೆ. ಆದರೂ ಕೆಲವು ಕಡೆಗಳಲ್ಲಿ ಈ ಹುಡುಗರ ಸಂಖ್ಯೆ ಜಾಸ್ತಿ ಇರಲು ಕಾರಣವೇನೆಂದರೆ, ವರ್ಷೇ ವರ್ಷೇ ಹುಡುಗರ ಸಂಖ್ಯೆ ಜಾಸ್ತಿಯಾಗುತ್ತಿದೆ, ಜೊತೆಗೆ ಕೆಲವು ಶಿಕ್ಷಕರು ನಿವೃತ್ತರಾಗುತ್ತಿದ್ದಾರೆ. ಈಗ ಖಾಲಿ ಇರುವ ಜಾಗಗಳಿಗೆ ಅರ್ಜಿಗಳನ್ನು ಕರೆದು ಅವುಗಳನ್ನು ಸೆಲೆಕ್ಷನ್ ಕಮಿಟಿಯ ಮುಂದೆ ಇಟ್ಟು ಜಾಗ್ರತೆ ಸೆಲೆಕ್ಷನ್ ಮಾಡಬೇಕೆಂದು ಆದೇಶ ಕೊಡುತ್ತೇವೆ ಏಪ್ರಿಲ್ ತಿಂಗಳ ಮಧ್ಯ ಭಾಗದಲ್ಲಿ ಹೊಸ ಕಮಿಟಿಯನ್ನು ರಚನೆ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಎಸ್.ಎಸ್. ಅರಕೇರಿ — ಈಗ ಒಳಿಗೆ ಜನ ಉಪಾಧ್ಯಾಯರುಗಳು ಏನಿದ್ದಾರೆ, ಇವರುಗಳ ಪೈಕಿ ಹರಿಜನ ಮತ್ತು ಗಿರಿಜನ ಉಪಾಧ್ಯಾಯರುಗಳು ಎಷ್ಟು ಮಂದಿ ಇದ್ದಾರೆಂದು ಹೇಳುತ್ತೀರಾ? ನನಗೆ ತಿಳಿದಂತೆ ಇವರ ಸಂಖ್ಯೆ ಕಡಿಮೆ ಇದೆ. ಆದ್ದರಿಂದ ಮುಂದೆ ೪೦ ಜನರನ್ನು ಹೊಸದಾಗಿ ನೇಮಕ ಮಾಡಿಕೊಳ್ಳುವಾಗ ಹರಿಜನ ಮತ್ತು ಗಿರಿಜನರಿಗೆ ಹೆಚ್ಚಿನ ಅದ್ಯತೆ ಕೊಟ್ಟು ಅವರನ್ನೇ ಹೆಚ್ಚಾಗಿ ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜಿ.ಬಿ. ಶಂಕರ್‌ರಾವ್ — ಈ ವಿವರ ನನ್ನ ಹತ್ತಿರ ಇಲ್ಲ. ಆ ರೆಕ್ರೂಟ್‌ಮೆಂಟ್ ಮಾಡುವ ಕಾಲಕ್ಕೆ ಎಸ್.ಸಿ. ಎಸ್.ಟಿಗೆ ರಾಜ್ಯಾಂಗದ ಪ್ರಕಾರ ಎಷ್ಟು ಸ್ಥಾನಗಳನ್ನು ವಿಾಸಲಿಡಬೇಕೋ ಅಷ್ಟು ಸ್ಥಾನಗಳು ಆ ಗಾಗಲೇ ಭರ್ತಿಯಾಗದಿದ್ದರೆ, ಇನ್ನು ಮುಂದೆ ಭರ್ತಿಯಾಗುವಷ್ಟರಮಟ್ಟಿಗೆ ಸರ್ಕಾರ ದವರು ನೋಡುತ್ತೇವೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

ಶ್ರೀ ಆರ್.ಆರ್. ಕಲ್ಲೂರ್ — ಬಿಜಾಪುರ ಜಿಲ್ಲೆಯಲ್ಲಿ ಒಂದು ವರ್ಷದ ಹಿಂದೆ ೪೦೦ ಶಿಕ್ಷಕರ ಜಾಗ ಗಳಿಗೆ ಖಾಲಿ ಇತ್ತು. ಈ ೪೦೦ ಜಾಗಗಳಿಗೆ ಅರ್ಜಿಗಳನ್ನು ಕರೆದಿತ್ತು. ಸಾವಿರಾರು ಅರ್ಜಿಗಳು ಬಂದಿದ್ದವು. ನಂತರ ಡಿ.ಡಿ.ಸಿ. ವಿಾಟಿಂಗ್‌ನಲ್ಲಿ ಚರ್ಚೆ ಮಾಡಿ ಈ ಖಾಲಿ ಜಾಗಗಳನ್ನು ಬೇರೆ ಕಡೆ ಕೊಟ್ಟಿದ್ದಾರೆ. ಈ ವಿಚಾರವನ್ನು ಡಿ.ಡಿ.ಪಿ.ಐ. ನಮಗೆ ತಿಳಿಸಿದರು. ಅದನ್ನು ಬೇರೆ ಕಡೆ ಕೊಟ್ಟಿದ್ದರಿಂದ ಬಿಜಾಪುರ ಜಿಲ್ಲೆಗೆ ಅನ್ಯಾಯವಾಗಿದೆ. ಇದನ್ನು ಸರಿಪಡಿಸುವಿರಾ?

ಶ್ರೀ ಜಿ.ಬಿ. ಶಂಕರ್‌ರಾವ್.—ಬಿಜಾಪುರದಲ್ಲಿರತಕ್ಕಂಥ ಮಂಜೂರಾತಿ ಜಾಗಗಳನ್ನು ಬೇರೆ ಕಡೆ ಅಂದರೆ ಬೇರೆ ಜಿಲ್ಲೆಗೆ ವರ್ಗಾಯಿಸಿಲ್ಲ.

ಶ್ರೀ ಆರ್.ಆರ್. ಕಲ್ಲೂರ್.—ಅಧಿಕಾರಿಗಳು ಬೇರೆ ಕಡೆ ವರ್ಗಾಯಿಸಿದ್ದಾರೆ ಎಂದು ಹೇಳಿದ್ದಾರೆ, ತಾವು ಇಲ್ಲ ಎಂದು ಹೇಳುತ್ತೀರಿ. ಅವರು ಸುಳ್ಳು ಹೇಳುತ್ತಾರೋ ಅಥವಾ ತಾವು ಸುಳ್ಳು ಹೇಳುತ್ತೀರೋ ನಮಗೆ ಗೊತ್ತಿಲ್ಲ.

ಶ್ರೀ ಜಿ.ಬಿ. ಶಂಕರ್‌ರಾವ್.—ನನ್ನ ಕಡೆ ಇರುವ ಮಾಹಿತಿ ಪ್ರಕಾರ ೩೮೭ ಜಾಗಗಳಿಗೆ ಶಿಕ್ಷಕರು ಬೇಕಾಗಿತ್ತು. ಅದು ಕೆಲವು ವರ್ಷಗಳ ಹಿಂದೆ ಹೆಚ್ಚು ಆಗಿದ್ದರಿಂದ ವರ್ಗಾಯಿಸಬೇಕಾಯಿತು. ೨೦೦ ಜಾಗಗಳಿಗೆ ಮಾತ್ರ ಬಿಜಾಪುರ ಜಿಲ್ಲೆಗೆ ವರ್ಗಾಯಿಸಬೇಕಾಯಿತು. ನಂತರ ಶಿಕ್ಷಕರು ನಿವೃತ್ತಿ ಹೊಂದಿದ್ದರಿಂದ ಇನ್ನೂ ಹೆಚ್ಚಾಗಿ ಶಿಕ್ಷಕರು ಬೇಕಾಗುತ್ತಾರೆ. ಸಧ್ಯಕ್ಕೆ ಮಂಜೂರಾತಿ ಕೊಟ್ಟಂಥ ಸ್ಥಾನಗಳು ೨೬೪. ಇನ್ನೂ ಹೆಚ್ಚಿಗೆ ಬೇಕಾದರೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್, ಫೈನಾನ್ಸ್ ಡಿಪಾರ್ಟ್‌ಮೆಂಟ್ ನವರನ್ನು ಕನ್‌ಸಲ್ಟ್ ಮಾಡಿ ಹೆಚ್ಚಾಗಿ ಶಿಕ್ಷಕರನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಬಿ. ಪಾಟೀಲ್ — ಪ್ರಾಥಮಿಕ ಶಾಲಾ ಶಿಕ್ಷಕರನ್ನು ಅಪಾಯಿಂಟ್‌ಮೆಂಟ್ ಮಾಡುವುದು ಸರ್ಕಾರಕ್ಕೆ ಒಂದು ದೊಡ್ಡ ಸಮಸ್ಯೆಯಾಗಿದೆ. ಮೇಲಾಗಿ ಎಷ್ಟೋ ಶಾಲೆಗಳಲ್ಲಿ ಶಿಕ್ಷಕರಿಲ್ಲದೆ ತೊಂದರೆಯಾಗಿದೆ. ಸ್ಟೂಡೆಂಟ್ಸ್ ಪಾಪ್ಯುಲೇಷನ್ ನೋಡಿಕೊಂಡು ಎಷ್ಟು ಬೇಕಾಗುತ್ತದೆ ಎಂದು ಪೀರಿಯಾಡಿಕಲ್ ರಿವ್ಯೂ ಮಾಡಿ ರೆಕ್ರೂಟ್‌ಮೆಂಟ್ ಮಾಡಿ ಶಿಕ್ಷಕರನ್ನು ಒದಗಿಸುತ್ತೀರಾ?

ಶ್ರೀ ಜಿ.ಬಿ. ಶಂಕರ್‌ರಾವ್.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಒಪ್ಪುತ್ತೇನೆ. ವರ್ಷೇ ವರ್ಷೇ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆ ಸಂಖ್ಯೆಗನುಗುಣವಾಗಿ ಶಿಕ್ಷಕರನ್ನು ಒದಗಿಸಬೇಕಾಗುತ್ತದೆ. ಇದನ್ನು ಯೋಜನೆ ಪ್ರಕಾರ ಮಾಡಬೇಕಾಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಕೊಂಡ , ಈ ವರ್ಷ ಎಷ್ಟು ಒದಗಿಸಬಹುದು, ಮುಂದಿನ ವರ್ಷ ಎಷ್ಟು ಒದಗಿಸಬಹುದು ಎಂದು ಆಲೋಚನೆ ಮಾಡಿಕೊಂಡು ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗದ ರೀತಿಯಲ್ಲಿ ಕಾರ್ಯಕ್ರಮವನ್ನು ಮಾಡ ಬೇಕಾಗುತ್ತದೆ. ರೆಕ್ರೂಟ್‌ಮೆಂಟ್ ಕಮಿಟಿಯನ್ನು ಏಪ್ರಿಲ್ ಮಧ್ಯದಲ್ಲಿ ಕಾನ್‌ಸ್ಟಿಟ್ಯೂಟ್ ಮಾಡಿ ಈ ಕೆಲಸ ನಿರ್ವಹಿಸಲಿಕ್ಕೆ ಸರ್ಕಾರ ಆದೇಶ ನೀಡುತ್ತದೆ.

ಶ್ರೀ ವಿ.ವಿ. ಪತ್ತಾರ್.—ಬಿಜಾಪುರ ಜಿಲ್ಲೆಯಲ್ಲಿ ಬೇಕಾಗುವ ಶಿಕ್ಷಕರ ಸ್ಥಾನಗಳನ್ನು ಸರ್ವೆ ಮಾಡಿ ದ್ದೀರಾ. ಎಷ್ಟು ಜನ ಶಿಕ್ಷಕರು ಬೇಕಾಗಿದ್ದಾರೆ, ಎಷ್ಟು ಜನ ಕಡಿಮೆಯಾಗಿದ್ದಾರೆ. ಎರಡನೆಯದಾಗಿ, ತಾಲ್ಲೂಕು ವೈಸ್ ಶಿಕ್ಷಕರ ಸಂಖ್ಯೆ ಎಷ್ಟು ಕಡಿಮೆಯಾಗಿದೆ ಮತ್ತು ಏಕೆ ಕಡಿಮೆಯಾಗಿದೆ ಎಂದು ವಿಚಾರ ಮಾಡಬೇಕು. ಎರಡು ವರ್ಷಗಳ ಹಿಂದೆ ಅಲ್ಲಿಂದ ಶಿಕ್ಷಕರನ್ನು ಬೆಂಗಳೂರು ಮತ್ತು ತುಮಕೂರಿಗೆ ಕಳಿಸಿದ್ದಾರೆ. ಆ ಶಿಕ್ಷಕರ ಸಂಖ್ಯೆಯನ್ನು ಭರ್ತಿ ಮಾಡದೇಹೋದರೆ ಶಿಕ್ಷಣ ನಡೆಯುವುದಿಲ್ಲ. ಇಂಥಾ ಒಂದು ಸಂದಿಗ್ಧ ಪರಿಸ್ಥಿತಿ ಬಿಜಾಪುರದಲ್ಲಿ ನಿರ್ಮಾಣವಾಗಿದೆ. ಮತ್ತೆ ಉರ್ದು ಶಾಲಾ ಶಿಕ್ಷಕರು ಅಲ್ಲಿ ಇಲ್ಲ. ಉರ್ದು ಶಾಲಾ ಶಿಕ್ಷಕರ ಹೆಚ್ಚಿನ ಸ್ಥಾನಗಳು ಖಾಲಿ ಇವೆ. ಆದ್ದರಿಂದ ತಾವು ಪ್ರತ್ಯೇಕವಾಗಿ ಡೈರಕ್ಷನ್ ಕೊಟ್ಟು ಉರ್ದು ಶಾಲೆಗಳಲ್ಲಿ ಶಿಕ್ಷಕರನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ.ಬಿ. ಶಂಕರ್‌ರಾವ್.—ಇದು ಉರ್ದು ಶಾಲಾ ಶಿಕ್ಷಕರಿಗೆ ಸಂಬಂಧಪಟ್ಟ ಪ್ರಶ್ನೆಯಲ್ಲ. ರಾಜ್ಯದಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳ ಸಂಖ್ಯೆ ಹೆಚ್ಚಾಗಿದೆ. ಮಾನ್ಯ ಸದಸ್ಯರು ಬಿಜಾಪುರದಿಂದ ತುಮಕೂರು ಬೆಂಗಳೂರಿಗೆ ಹೆಚ್ಚುವರಿ ಶಿಕ್ಷಕರನ್ನು ಕಳಿಸಿಕೊಟ್ಟರು ಎಂದು ಹೇಳಿದರು. ಅದು ಇವತಿ ನ ವಿಚಾರ ಅಲ್ಲ. ಆ ಕಾಲಕ್ಕೆ ಹೆಚ್ಚಾಗಿ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದರಿಂದ ಬೇರೆ ಕಡೆಗೆ ವರ್ಗಾ ಯಿಸಬೇಕಾಯಿತು. ಈಗ ಇತ್ತಿತ್ತಲಾಗಿ ನಿವೃತ್ತಿ ಹೊಂದಿದ ಶಿಕ್ಷಕರ ಸ್ಥಾನಗಳನ್ನು ಭರ್ತಿಮಾಡಬೇಕು. ಮತ್ತೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ಸಂಖ್ಯೆಯನ್ನು ಹೆಚ್ಚು ಮಾಡಬೇಕಾಗುತ್ತದೆ. ಆದ್ದರಿಂದ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗಳ ಮಂಜೂರಾತಿ ಪಡೆದುಕೊಂಡು ರೆಕ್ರೂಟ್‌ಮೆಂಟ್ ಕಮಿಟಿಯನ್ನು ಏಪ್ರಿಲ್ ತಿಂಗಳ ಮಧ್ಯ ಭಾಗದಲ್ಲಿ ಕಾನ್‌ಸ್ಟಿಟ್ಯೂಟ್ ಮಾಡುತ್ತೇನೆ. ಇಷ್ಟು ಹೇಳಿದರೆ ಮಾನ್ಯ ಸದಸ್ಯರಿಗೆ ತೃಪ್ತಿಯಾಗುತ್ತದೆಂದು ತಿಳಿದುಕೊಂಡಿದ್ದೇನೆ.

Electrification of villages in Mulbagal Taluk

53 SRI J.M. REDDY (Mulbagal).—Will the Chief Minister be pleased to state :

46% of the villages in Mulbagal Taluk have been electrified, the remaining 54% of the villages lack this facility and does the Government intend to electrify them during the current year?

SRI R. GUNDU RAO (Chief Minister)—.

215 villages have been electrified out of 302 inhabited villages. Therefore, 71% of the villages in Mulbagal taluk have been electrified as on 31-12-1979. The remaining villages will be taken up as and when funds permit.

ಶ್ರೀ ಜೆ.ಎಂ. ರೆಡ್ಡಿ.—ಉತ್ತರದಲ್ಲಿ ೩೦೨ ಗ್ರಾಮಗಳು ಎಂದು ಹೇಳಿದ್ದೀರಿ. ನನ್ನ ತಾಲ್ಲೂಕಿನಲ್ಲಿ ೩೬೫ ಇವೆ. ಉಳಿದ ೧೫೦ ಗ್ರಾಮಗಳಿಗೆ ಪ್ರಸಕ್ತ ಸಾಲಿನಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರಾ ಎಂದು ಮಾನ್ಯ ಮಂತ್ರಿ ಮಾಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಎಲ್ಲವನ್ನೂ ಒಂದೇ ಸಾರಿ ತೆಗೆದುಕೊಂಡು ಮಾಡುವುದಕ್ಕಾಗುವು ದಿಲ್ಲ. ಹಂತಹಂತವಾಗಿ ಎಲ್ಲಾ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುತ್ತದೆ.